**<u>ದಿನಾಂಕಃ 04-06-2026 ರಂದು ಪ್ರಮಾಣ ವಚನವನ್ನು ಬೋಧಿಸಲಾಯಿತು.</u>**
**<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಎಸ್.ಆರ್.ಜಿ. ವಕೀಲರಿಂದಃ</u>**

1. ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ಈ ದಾವೆಯನ್ನು ನಾನು ಭಾವ ಬೇಕೆಂದು ಸಲ್ಲಿಸಿರುತ್ತೇನೆ. ದಾವಾ ಸರ್ವೆ ನಂಬರ 13/1 ವಿ.4 ಎಕರೆ 25 ಗುಂಟೆ. ಅದೇ ರೀತಿ ಎರಡು ಮನೆಗೆ ಸಂಬಂಧಿಸಿದಂತೆ ಈ ದಾವೆ ಸಲ್ಲಿಸಿರುತ್ತೇನೆ. ನನಗೆ ಮನೆ ನಂಬರ ಹೇಳಲು ಆಗುವುದಿಲ್ಲ. ನನಗೆ ಮನೆ ನಂಬರ ಗೊತ್ತಿರುವುದಿಲ್ಲ. ನನಗೆ ದಾವಾ ಐಟಂ ನಂ.2 ರ ವಿಸ್ತೀರ್ಣ ಹೇಳಲು ಆಗುವುದಿಲ್ಲ. ನನಗೆ ದಾವಾ ಐಟಂ ನಂ.3 ರ ವಿಸ್ತೀರ್ಣ ಗೊತ್ತಿರುವುದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿರುವ ವಿಷಯಗಳನ್ನು ನಾನು ತಿಳಿದುಕೊಂಡಿರುತ್ತೇನೆ.

2. ದಾವಾ ಐಟಂ ನಂ.1 ನಮ್ಮ ತಾತನಿಂದ ನಮ್ಮ ತಂದೆಗೆ ಬಂದಿರುತ್ತದೆ. ದಾವಾ ಐಟಂ ನಂ.1 ನನ್ನ ತಾತನ ಹೆಸರಿಗೆ ಆಸ್ತಿ ಇರುವ ಬಗ್ಗೆ ದಾಖಲೆ ನಾನು ನ್ಯಾಯಾಲಯಕ್ಕೆ ನೀಡಿರುವುದಿಲ್ಲ. ದಾವಾ ಐಟಂ ನಂ.2 ಮತ್ತು 3 ಕುಡಿಯನೂರು ಗ್ರಾಮದಲ್ಲಿ ಇರುತ್ತವೆ. ನಾನು ವಾದಪತ್ರದ ಶೆಡ್ಯೂಲ್ ನಲ್ಲಿ ದಾವಾ ಐಟಂ ನಂ.2 ಮತ್ತು 3 ಕುಡಿಯನೂರು ಗ್ರಾಮದಲ್ಲಿ ಇರುತ್ತವೆ ಎಂದು ಹೇಳಿ ಬರೆಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂ.2 ಮತ್ತು 3 ನನ್ನ ತಂದೆ ಮುನಿವೆಂಕಟಪ್ಪನಿಗೆ ಶ್ರೀನಿವಾಸಚಾರ್ಯ ಎನ್ನುವವರು ನೀಡಿದ್ದರು. ಶ್ರೀನಿವಾಸಚಾರ್ಯ ರವರು ಕುಡಿಯುನೂರು ಗ್ರಾಮದ ದೇವಸ್ಥಾನದ ಅರ್ಚಕರು ಎಂದರೆ ಸರಿ.

3. ಶ್ರೀನಿವಾಸಚಾರ್ಯರವರು ನನ್ನ ತಂದೆಗೆ ದಾವಾ ಐಟಂ ನಂ. 2 ಮತ್ತು 3 ನೀಡಿರುವ ಬಗ್ಗೆ ಯಾವುದೇ ದಾಖಲೆ ನಾನು ನ್ಯಾಯಾಲಯಕ್ಕೆ ನೀಡಿರುವುದಿಲ್ಲ. ದಾವಾ ಐಟಂ ನಂ.2 ಮತ್ತು 3 ನನ್ನ ತಂದೆಯ ಪಿತ್ರಾರ್ಜಿತ ಆಸ್ತಿಗಳು ಆಗಿರುತ್ತವೆ. ಪ್ರತಿವಾದಿ ನನ್ನ ತಮ್ಮನಾಗಬೇಕು. ಅವರು ವ್ಯವಸಾಯ ಮಾಡುತ್ತಾರೆ. ಪ್ರತಿವಾದಿ ಲಾರಿ ಚಾಲಕ ಮತ್ತು ಕ್ಲೀನರ್ ಆಗಿ ಕೆಲಸ ಮಾಡುತ್ತಿದ್ದರು. ದಾವಾ ಐಟಂ ನಂ.2 ಮತ್ತು 3 ರ ಮನೆಗಳು ನನ್ನ ತಂದೆ ಜೀವಂತ ಇರುವಾಗ ಕಟ್ಟಿರುತ್ತಾರೆ. ನನ್ನ ತಂದೆ ತೀರಿಹೋಗಿ 16-17 ವರ್ಷಗಳಾಗಿರುತ್ತವೆ. ನನಗೆ ದಿನಾಂಕ ಗೊತ್ತಿರುವುದಿಲ್ಲ. ನನ್ನ ತಂದೆ ದಿನಾಂಕಃ- 03-08-1997 ರಂದು ತೀರಿಹೋಗಿರುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿ ಇರಬಹುದು ಎಂದು ಉತ್ತರಿಸುತ್ತಾರೆ.

4. ನನಗೆ ಮತ್ತು ಗೋವಿಂದರಾಜುಗೆ 1979 ರಲ್ಲಿ ಮದುವೆ ಆಗಿರುತ್ತದೆ ಎಂದರೆ ಸುಳ್ಳು. ನಾನು ಗೋವಿಂದರಾಜುಗೆ ಮದುವೆ ಆಗಿ 3 ತಿಂಗಳ ಕಾಲ ಸಂಸಾರ ಮಾಡಿ ವಾಪಸ್ಸು ಬಂದಿರುತ್ತೇನೆ ಎಂದರೆ ಸರಿಯಲ್ಲ. 1981 ರಲ್ಲಿ ನಾನು ಶ್ರೀನಿವಾಸ ಎನ್ನುವವರ ಜೊತೆ ಮದುವೆ ಆಗಿರುತ್ತೇನೆ ಎಂದರೆ ಸುಳ್ಳು. ನನಗೆ ಶ್ರೀನಿವಾಸ ರವರಿಂದ ಒಂದು ಗಂಡು ಮಗು ಜನಿಸಿ ಅದು ತೀರಿಹೋಗಿರುತ್ತದೆ ಎಂದರೆ ಸುಳ್ಳು. ನಾನು ಶ್ರೀನಿವಾಸರವರನ್ನು ಬಿಟ್ಟು ಮರಳಿ ನನ್ನ ತವರು ಮನೆಗೆ ಬಂದಿರುತ್ತೇನೆ ಎಂದರೆ ಸುಳ್ಳು. ನಾನು ಮುನಿಸ್ವಾಮಿ ರವರನ್ನು ಮದುವೆ ಆಗಿ ಅವರ ಜೊತೆ ವಾಸವಾಗಿರುತ್ತೇನೆ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದು, ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ.ಕೇ. ಹೇ. ಸರಿ ಇದೆ.**

**Sd/-**
**(ದಯಾನಂದ)**
**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಲೂರು.**